(ಇಂದು ದಿಃ 29-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:-** ಶ್ರೀ. **HSR** ವಕೀಲರಿಂದ **:-**

ನಾನು ಮಡಿವಾಳ ಸಮುದಾಯಕ್ಕೆ ಸೇರಿದವನು. ವಾದಿ ಶಾಮಮ್ಮನ ಗಂಡನ ಹೆಸರು ಆಶಪ್ಪ. ಶಾಮಮ್ಮನ ಅಡ್ಡ ಹೆಸರು ಬೆಸ್ತ. ಸಾಯಮ್ಮ ನನಗೆ ಗೊತ್ತಿಲ್ಲ. ಸಾಯಮ್ಮ ನನಗೆ ಪರಿಚಯ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ . ನಾನು ಅರ್ಕ ಹೊಲ ಹೆಸರಿನ ಜಮೀನಿಗೆ ಕೆಲಸಕ್ಕೆ ಹೋಗಿದ್ದೆ. ಅದು 6 ಎಕರೆ ಇದೆ. ಸದರಿ ಸ್ವತ್ತಿನ ಚೆಕಬಂದಿ ನನಗೆ ಗೊತ್ತಿಲ್ಲ. ಈ ವರ್ಷ ಆ ಜಮೀನಿಗೆ ಕೆಲಸಕ್ಕೆ ಹೋಗಿಲ್ಲ. ಕಳೆದ 3 ವರ್ಷಗಳಿಂದ ಕೆಲಸಕ್ಕೆ ಹೋಗಿದ್ದೆ. ಮುಟೇಷನ ಆದ ಬಗ್ಗೆ ದಾಖಲಾತಿಗಳನ್ನು ನಾನು ನೋಡಿಲ್ಲ. ಶಾಮಮ್ಮನ ತವರು ಮನೆ ಸಿಲಾರಕೋಟ ಮತ್ತು ಗಂಡನ ಮನೆ ಚಂದ್ರಕಲಾ. ಅವಳು ಚಂದ್ರಕಲಾದಲ್ಲಿ ವಾಸ ಇದ್ದಳು. ಶಾಮಮ್ಮ ನನಗೆ ಚಿಕ್ಕಂದಿನಿಂದ ಪರಿಚಯ. ಅವಳು ತೀರಿಹೋಗಿ 4-5 ವರ್ಷ ಆಗಿದೆ.

ಓ.ಎಸ್. ನಂ. 19/2015
ಪಿ.ಡಬ್ಲ್ಯೂ- 3

ನಾನು ಬಿಚ್ಚಾಳ ಗ್ರಾಮದ ಜಮೀನಿಗೆ ಮತ್ತು 6 ಎಕರೆ ಜಮೀನಿಗೆ ಕೆಲಸಕ್ಕೆ ಹೋಗಿದ್ದೆ. ವಾದಿ ಹೆಸರಿನಲ್ಲಿ ಸಿಲಾರಕೋಟದಲ್ಲಿ ಯಾವುದೇ ಜಮೀನುಗಳು ಇಲ್ಲದೆ ಇದ್ದರೂ ಕೂಡ ಅವಳು ನಮ್ಮ ಗ್ರಾಮದ ಹೆಣ್ಣು ಮಗಳು ಆಗಿರುವ ಕಾರಣ ಅವಳ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎತ್ತುಗಳ ಮೂಲಕ ಕುಂಟೆ ಹೊಡೆಯುತ್ತಿದ್ದೆ. ಎತ್ತುಗಳು ಶಾಮಮ್ಮನ ಬಳಿ ಇದ್ದವು. 4 ಎತ್ತುಗಳು ಇದ್ದವು. ಚಂದ್ರಕಲಾ ಗ್ರಾಮದಿಂದ ಜಮೀನು 2 ಕೀ.ಮೀ ದೂರ ಇದೆ ಎಂದರೆ ಸರಿ. ನನಗೆ ಕುಂಟೆ ಹೊಡೆಯಲು ಬರುವುದಿಲ್ಲ ಮತ್ತು ಯಾವುದೇ ಕೃಷಿ ಕೆಲಸ ಬರುವುದಿಲ್ಲ ಹಾಗಿದ್ದರೂ ಕೂಡ ಜಮಿನಿಗೆ ಕೆಲಸಕ್ಕೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಜಮೀನುಗಳು ಇವೆ ಅವುಗಳ ಪಹಣಿ ಹಾಜರುಪಡಿಸಿಲ್ಲ. ನನಗೆ 2 ಎಕರೆ ಜಮೀನು ಇದೆ. ನಾನು ವ್ಯವಸಾಯ ಮಾಡುತ್ತೇನೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ನಾನು ಶಾಮಮ್ಮ ಕರೆದಾಗ ಜಮಿನಿಗೆ ಕೆಲಸಕ್ಕೆ ಹೋಗುತ್ತಿದ್ದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ವಾದಿ ಶಾಮಮ್ಮ ಸಾಯಮ್ಮನ ಮಗಳು. ಸಾಯಮ್ಮನ ಗಂಡನ ಹೆಸರು ನನಗೆ ಗೊತ್ತಿಲ್ಲ. ಸಾಯಮ್ಮ ಸಿಲಾರಕೋಟ ಗ್ರಾಮದವಳು. ಸಾಯಮ್ಮನಿಗೆ ಎಷ್ಟು ಜನ ಹೆಣ್ಣು ಮಕ್ಕಳು ನನಗೆ ಗೊತ್ತಿಲ್ಲ. 2024-25 ರಲ್ಲಿ ತೋಗರಿ ಮತ್ತು ಉದ್ದು ಬಿತ್ತನೆ ಮಾಡಿದ್ದೇವೆ. ಅದರ ಹಿಂದಿನ 2 ವರ್ಷ ಬಿತ್ತನೆ ಮಾಡಲು ನಾನು ಹೋಗಿರಲಿಲ್ಲ. ಶಾಮಮ್ಮ ನಮ್ಮ ಪಕ್ಕದ ಮನೆಯವರು ಆಗಿರುವ ಕಾರಣ ಅವರ ಜಮಿನಿಗೆ ಕೆಲಸಕ್ಕೆ ಹೋಗುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿ ತೆಲುಗು ಭಾಷಿಕರಾಗಿದ್ದ ಕಾರಣ ಶ್ರೀ. NM ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಕ ಮಾಡಿಕೊಂಡು ಕನ್ನಡದಲ್ಲಿ ಸಾಕ್ಷಿ ದಾಖಲುಮಾಡಿಕೊಳ್ಳಲಾಗಿದೆ.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.